# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **318/2014**

ಪಿ.ಡಬ್ಲ್ಯೂ- 3

**ದಿನಾಂಕಃ 05-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಅರ್ಜುನ ಕೊಪ್ಪದ |
| ತಂದೆಯ/ಗಂಡನ ಹೆಸರು | : | ಗಿರಿಯಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ ಎಸ್ ಐ ಕುಲಗೋಡ ಪೊಲೀಸ್ ಠಾಣೆ |
| ವಾಸ ಸ್ಥಳ | : | ಕುಲಗೋಡ |
| ತಾಲೂಕು | : | ಮೂಡಲಗಿ |

**ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿ ಸಾಕ್ಷಿ ಹೇಳಿಕೆಃ**

ನಾನು 2022 ರಿಂದ ಇಲ್ಲಿಯವರೆಗೆ ಕುಲಗೋಡ ಪೊ. ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಸದರಿ ಪ್ರಕರಣದಲ್ಲಿ ಆರೋಪಿತನ ಪತ್ತೆಗಾಗಿ ನ್ಯಾಯಾಲಯ ಉದ್‌ಘೋಷಣೆ ಮತ್ತು ಜಪ್ತಿ ಆದೇಶ ಹೊರಡಿಸಿತ್ತು. ನಾನು ಸದರಿ ಉದ್‌ಘೋಷಣೆ ಮತ್ತು ಆರೋಪಿ ಆಸ್ತಿ ಜಪ್ತಿ ಕುರಿತು ಅಮಲ ಬಟಾವಣೆ ಮಾಡಲು ವಾರೆಂಟ ಪಡೆದುಕೊಂಡೆನು. ದಿಃ 11-12-2022 ರಂದು ಇಬ್ಬರು ಪಂಚರಾದ ಭೀಮಪ್ಪ ಹುಚ್ಚನ್ನವರ ಮತ್ತು ಮುಸ್ತಾಕ ಲಾಡಖಾನ ಇವರನ್ನು ಕೇಳಿಕೊಂಡ ಮೇರೆಗೆ ಸದರಿ ಅವರು ಪಂಚರಾಗಲು ಒಪ್ಪಿಕೊಂಡು ದಿಃ 11-12-2022 ರಂದು ನಾವು ಆರೋಪಿ ಮಲ್ಲಪ್ಪ ಸಿದ್ರಾಮ ಬೆಂಡವಾಡ ತಿಗಡಿ ನಿವಾಸಿ ಇತನ ವಿರುದ್ಧ ಉದ್‌ಘೋಷಣೆ ಕೂಗಿಸಲು ಆತನ ವಿಳಾಸಕ್ಕೆ ಹೋಗಿದ್ದು ಇರುತ್ತದೆ.

ಅಲ್ಲಿ ನಾವು ಡಂಗುರ ಸಾರುತ್ತಾ ಆರೋಪಿಯ ವಿಳಾಸ ಇರುವ ಸುತ್ತಮುತ್ತ ಸಾರ್ವಜನಿಕ ಸ್ಥಳವಾದ ತಿಗಡಿ ಗ್ರಾಮ ಪಂಚಾಯಿತಿಯ ಗೋಡೆಗೆ ಮತ್ತು ಬಸ್ ನಿಲ್ದಾಣದ ಗೋಡೆಗೆ ಸಾರ್ವಜನಿಕವಾಗಿ ಕಾಣುವಂತೆ ಆದೇಶದ ಪ್ರತಿ ಅಂಟಿಸಲಾಯಿತು. ಸದರಿ ಪ್ರದೇಶದಲ್ಲಿ ಬೇರೆಯವರಿಗೆ ಆರೋಪಿತನ ಕುರಿತು ಉದ್ ಘೋಷಣೆ ಹೊರಡಿಸಿದ ಕುರಿತು ತಿಳಿಸಿರುತ್ತೇನೆ. ಸದರಿ ಕಾರ್ಯವನ್ನು ನಾವು ಮಧ್ಯಾಹ್ನ 04-00 ರಿಂದ 05-00 ರವರೆಗೆ ಮಾಡಿ ಸ್ಥಳದಲ್ಲಿಯೇ ಕುಳಿತು ಪಂಚನಾಮೆ ಬರೆದಿರುತ್ತೇನೆ. ಪಂಚರು ಓದಿ ತಿಳಿದ ನಂತರ ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪಿ.ಡಬ್ಲ್ಯೂ- 3

ನಾನು ತಿಗಡಿ ಗ್ರಾಮಪಂಚಾಯಿತಿ ಇವರಿಗೆ ಆರೋಪಿಯ ಹೆಸರಿನಲ್ಲಿದ್ದ ಆಸ್ತಿಯ ವಿವರ ಸಲ್ಲಿಸಲು ಅರ್ಜಿ ಮೂಲಕ ಕೋರಿದ್ದೆನು. ಸದರಿ ತಿಗಡಿ ಗ್ರಾಮಪಂಚಾಯಿತಿ ದಿಃ 12-12-2022 ರಂದು ಆರೋಪಿಯ ಹೆಸರಿನಲ್ಲಿ GPC No.126 ಮಳಿಗೆ ಮನೆ ಇರುವುದಾಗಿ ಹಿಂಬರಹವನ್ನು ನೀಡಿದ್ದಾರೆ. ಅದನ್ನು ಮಾನ್ಯ ನ್ಯಾಯಕ್ಕೆ ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಈ ಪ್ರಕಾರ ನಾನು ನ್ಯಾದ ಆದೇಶವನ್ನು ಜಾರಿಗೊಳಿಸಿರುತ್ತೇನೆ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.